# ಕುವೆಂಪು ವಿಶ್ವವಿದ್ಯಾಲಯ

## 2023–24ನೇ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು

## ಸಭಾ ದಿನಾಂಕ:26–02–2024

ಹಣಕಾಸು ವಿಭಾಗ

ಜ್ಞಾನಸಹ್ಯಾದ್ರಿ, ಶತಮಾನೋತ್ಸವ ಭವನ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ

# ಕುವೆಂಪು ವಿಶ್ವವಿದ್ಯಾಲಯ

ದಿನಾಂಕ:26-02-2024ರಂದು ಸೋಮವಾರ ಅಪರಾಹ್ನ 12-45 ಘಂಟೆಗೆ ಬೆಂಗಳೂರಿನ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಭಾಂಗಣದಲ್ಲಿ ನಡೆದ 2023-24ನೇ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳು.

| ಹಾಜರಾದ ಸದಸ್ಯರು: | ಪದನಾಮ |
|---|---|
| 1. **ಪ್ರೊ. ಎಸ್. ವೆಂಕಟೇಶ್**<br>ಮಾನ್ಯ ಕುಲಪತಿಗಳು (ಪ್ರಭಾರ) | ಅಧ್ಯಕ್ಷರು |
| 2. **ಶ್ರೀಮತಿ ಉಮಾ. ಕೆ**<br>ಜಂಟಿ ಕಾರ್ಯದರ್ಶಿಗಳು<br>ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ,<br>ವಿಧಾನಸೌಧ, ಬೆಂಗಳೂರು | ಸದಸ್ಯರು |
| 3. **ಶ್ರೀ ಎನ್. ಕುಮಾರ್**<br>ಸರ್ಕಾರದ ಉಪಕಾರ್ಯದರ್ಶಿಗಳು<br>(ತಾಂತ್ರಿಕ ಶಿಕ್ಷಣ ಮತ್ತು ಯೋಜನೆ)<br>ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 4. **ಶ್ರೀ ಗುರುರಾಜ್ ರಾವ್**<br>ಹಿರಿಯ ನಿರ್ದೇಶಕರು ಹಾಗೂ<br>ಪದನಿಮಿತ್ತ ಜಂಟಿ ಕಾರ್ಯದರ್ಶಿ<br>ಯೋಜನಾ ಇಲಾಖೆ, ಕರ್ನಾಟಕ ಸರ್ಕಾರದ ಸಚಿವಾಲಯ<br>ಬೆಂಗಳೂರು. | ಸದಸ್ಯರು |
| 5. **ಶ್ರೀ ಶಶಿಧರ್. ಟಿ. ಎನ್**<br>ಸಿಂಡಿಕೇಟ್ ಸದಸ್ಯರು | ಸದಸ್ಯರು |
| 6. **ಶ್ರೀ ವಿಜಯಕುಮಾರ. ಹೆಚ್. ಬಿ.** ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯರು |
| 7. **ಪ್ರೊ. ಗೋಪಿನಾಥ್. ಎಸ್. ಎಂ.**<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 8. **ಶ್ರೀ. ಟಿ. ಬಂಗಾರಪ್ಪ.** ಕೆ.ಎಸ್.ಎ.ಎಸ್.<br>ಹಣಕಾಸು ಅಧಿಕಾರಿ | ಸದಸ್ಯ ಕಾರ್ಯದರ್ಶಿಗಳು |

-2

<u>ಪ್ರಸ್ತಾವನೆ:</u>

ಪ್ರಾರಂಭದಲ್ಲಿ, ಹಣಕಾಸು ಅಧಿಕಾರಿಗಳು 2023-24ನೇ ಸಾಲಿನ ಆರ್ಥಿಕ ವರ್ಷದ ತೃತೀಯ ಹಣಕಾಸು ಸಮಿತಿ ಸಭೆಗೆ ಮಾನ್ಯ ಕುಲಪತಿಗಳಿಗೆ ಮತ್ತು ಇತರೆ ಸದಸ್ಯರುಗಳಿಗೆ ಹಾಗೂ ನೂತನ ಕುಲಸಚಿವರಾಗಿ ಆಗಮಿಸಿದ ಶ್ರೀ. ಹೆಚ್.ಬಿ. ವಿಜಯಕುಮಾರ ಕೆ.ಎ.ಎಸ್. ಇವರನ್ನು ಸಭೆಗೆ ಪರಿಚಯಿಸಿ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಕಾರ್ಯಸೂಚಿಯ ಪ್ರಮುಖ ವಿಷಯಗಳ ಬಗ್ಗೆ ಸಂಕ್ಷಿಪ್ತವಾಗಿ ಸಭೆಗೆ ವಿವರಿಸಿದರು. ನಂತರ ಸಭೆಯ ಅಧ್ಯಕ್ಷರ ಅನುಮತಿಯನ್ನು ಪಡೆದು ಸಭಾ ಕಾರ್ಯಸೂಚಿಯಂತೆ ಕಾರ್ಯಕಲಾಪಗಳನ್ನು ಕೈಗೆತ್ತಿಕೊಳ್ಳಲಾಯಿತು.

| | |
|---|---|
| 2023-ಹಸ:3:01 | **ದಿನಾಂಕ:18-01-2024ರಂದು ನಡೆದ 2023-24ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ದೃಢೀಕರಣ** |
| ನಿರ್ಣಯ: | ದಿನಾಂಕ:18-01-2024ರಂದು ನಡೆದ 2023-24ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಸಭೆಯು ಪರಿಶೀಲಿಸಿ ದೃಢೀಕರಿಸಿತು. |
| 2023-ಹಸ:3:02 | **ದಿನಾಂಕ: 18-01-2024ರಂದು ನಡೆದ 2023-24ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿ.** |
| ನಿರ್ಣಯ: | ದಿನಾಂಕ:18-01-2024ರಂದು ನಡೆದ 2023-24ನೇ ಹಣಕಾಸು ವರ್ಷದ ದ್ವಿತೀಯ ಹಣಕಾಸು ಸಮಿತಿ ಸಭೆಯ ನಡಾವಳಿಗಳ ಮೇಲೆ ಕೈಗೊಂಡ ಕ್ರಮಗಳ ವರದಿಯನ್ನು ಸಭೆಯು ಅನುಮೋದಿಸಿತು. |
| 2023-ಹಸ:3:03 | **2024-25ನೇ ಆರ್ಥಿಕ ವರ್ಷ ಆಯ-ವ್ಯಯ ಅಂದಾಜು ಅನುಮೋದನೆ ಕುರಿತು.** |
| ನಿರ್ಣಯ: | 2024-25ನೇ ಆರ್ಥಿಕ ವರ್ಷದ ಆಯ-ವ್ಯಯದ ಅಂದಾಜನ್ನು ಹಣಕಾಸು ಅಧಿಕಾರಿಯವರು ಸಭೆಯ ಅನುಮೋದನೆಗೆ ಮಂಡಿಸಿದರು.<br><br>ಸಭೆಯು ಕೂಲಂಕಷವಾಗಿ ಪರಿಶೀಲಿಸಲಾಯಿತು. ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಸ್ವೀಕೃತಿ ಭಾಗದಲ್ಲಿ ರೂ.1346.25 ಲಕ್ಷಗಳನ್ನು ಸರ್ಕಾರದಿಂದ ನಿರೀಕ್ಷಿತವೆಂದು ತೋರಿಸಿಕೊಂಡು ಸಹ ರೂ.540.72 ಲಕ್ಷಗಳನ್ನು ಕೊರತೆ ಆಯವ್ಯಯವನ್ನು ಮಂಡಿಸಿರುತ್ತೀರಿ ಎಂದು ಆಕ್ಷೇಪಣೆ ವ್ಯಕ್ತಪಡಿಸಿದರು. ಖಾಲಿ ಹುದ್ದೆಗಳಿಗೆದುರಾಗಿ ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರು ಮತ್ತು ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಬಾಬ್ತುಗಳನ್ನು ತಮ್ಮ ಆಂತರಿಕ ಸಂಪನ್ಮೂಲದಲ್ಲಿಯೇ ಭರಿಸತಕ್ಕದ್ದು.<br><br>ಸರ್ಕಾರದಲ್ಲಿ ಆರ್ಥಿಕ ಮಿತವ್ಯಯವಿರುವುದರಿಂದ ಬಿಡುಗಡೆ ಮಾಡಿರುವ ಮೊತ್ತಕ್ಕಿಂತ ಹೆಚ್ಚುವರಿ ಅನುದಾನವನ್ನು ಸರ್ಕಾರ ಬಿಡುಗಡೆ ಮಾಡುವುದಿಲ್ಲವೆಂದು ಸ್ಪಷ್ಟವಾಗಿ ಸಭೆಯ ಗಮನಕ್ಕೆ ತಂದರು. ವಿಶ್ವವಿದ್ಯಾಲಯದ ಹೆಚ್ಚುವರಿ ಅನುದಾನದ ಬಗ್ಗೆ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಬಿಡುಗಡೆ ಮಾಡುವಂತೆ ಕುಲಸಚಿವರು ಕೋರಿದರು. ಸರ್ಕಾರದ ಪ್ರತಿನಿಧಿಗಳು ಮಾತನಾಡಿ ವೆಚ್ಚಗಳನ್ನು ಹಾಗೂ ಹೆಚ್ಚುವರಿ ಹೊರಗುತ್ತಿಗೆ ಸಿಬ್ಬಂದಿಗಳನ್ನು ಕಡಿತಗೊಳಿಸಬೇಕೆಂದು ತಿಳಿಸಿದರು. ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕೆಂದು ಹಾಗೂ ಆಂತರಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಬೇಕೆಂದು ಸಲಹೆ ನೀಡಿದರು. |

<table>
<tr><td></td><td>ವಿಶ್ವವಿದ್ಯಾಲಯದಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಏಜೆನ್ಸಿ ಮೂಲಕ ನೇಮಕ ಮಾಡಿಕೊಳ್ಳದೇ ಸ್ವಚ್ಛತಾ ಕಾರ್ಯವನ್ನು ನಿರ್ವಹಿಸಲು ಪ್ರತ್ಯೇಕವಾಗಿ ಟೆಂಡರ್ ಮೂಲಕ ಕರೆಯುವುದು ಎಂದು ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ ಇವರು ಸಲಹೆ ನೀಡಿದರು.<br><br>ಸದರಿ ಆಯವ್ಯಯದಲ್ಲಿ ಸರ್ಕಾರದ ನಿರೀಕ್ಷೆಯನ್ನು ತೆಗೆಯಬೇಕೆಂದು ಸ್ಪಷ್ಟವಾಗಿ ತಿಳಿಸಿದ ಹಿನ್ನೆಲೆಯಲ್ಲಿ ಆಯವ್ಯಯವನ್ನು ಈ ಕೆಳಗಿನಂತೆ ಮಾರ್ಪಾಡು ಮಾಡಲು ಸಭೆಯು ನಿರ್ಣಯಿಸಿತು.</td></tr>
<tr><td></td><td><u>ಸ್ವೀಕೃತಿಗಳ ಶೀರ್ಷಿಕೆಯಡಿಯಲ್ಲಿ</u> ಸರ್ಕಾರದ ನಿರೀಕ್ಷಿತ ಆದಾಯವನ್ನು ರೂ.1046.25 ಲಕ್ಷಗಳನ್ನು ಕಡಿತಗೊಳಿಸಲಾಗಿದೆ. ಎಸ್.ಸಿ.ಪಿ/ ಟಿ.ಎಸ್.ಪಿ. ಯೋಜನೆಯಡಿಯಲ್ಲಿ ರೂ.100.00 ಲಕ್ಷಗಳನ್ನು ನಿರೀಕ್ಷಿಸಲಾಗಿದೆ. ಪ್ರವೇಶ ಶುಲ್ಕಗಳಲ್ಲಿ ರೂ.100.00 ಲಕ್ಷಗಳನ್ನು ಹೆಚ್ಚುವರಿ ನಿರೀಕ್ಷೆ ಮಾಡಲಾಗಿದೆ ಹಾಗೂ ಪರೀಕ್ಷಾ ಶುಲ್ಕಗಳಲ್ಲಿ ರೂ.400.00 ಲಕ್ಷಗಳನ್ನು ಹೆಚ್ಚುವರಿ ನಿರೀಕ್ಷೆ ಮಾಡಲಾಗಿದೆ.<br><br><u>ವೆಚ್ಚಗಳ ಶೀರ್ಷಿಕೆಯಲ್ಲಿ</u> ವೇತನ ಮತ್ತು ಭತ್ಯೆಗಳು, ಮಧ್ಯಂತರ ಪರಿಹಾರ ರೂ.240.00 ಲಕ್ಷಗಳನ್ನು ಕಡಿತಗೊಳಿಸಲಾಗಿದೆ ಹಾಗೂ ಭದ್ರತಾ ಸಿಬ್ಬಂದಿ/ ಸರ್ವಿಸಸ್ ಏಜೆನ್ಸಿ ವೇತನದಲ್ಲಿ ರೂ.561.15 ಲಕ್ಷಗಳನ್ನು ಕಡಿತಗೊಳಿಸಲಾಗಿದೆ.<br><br>ಒಟ್ಟಾರೆ ರೂ.185.82 ಲಕ್ಷಗಳನ್ನು ಕೊರತೆ ಆಯವ್ಯಯವನ್ನು ತಯಾರಿಸಲಾಗಿದೆ. ಪರಿಷ್ಕರಿಸಿರುವ ನಂತರ ಆಯ-ವ್ಯಯವನ್ನು ಪರಿಷ್ಕರಿಸಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ಅನುಮೋದಿಸಲಾಯಿತು.</td></tr>
<tr><td>2023-ಹಸ:3:04</td><td>2023-24ನೇ ಹಣಕಾಸು ವರ್ಷದ ಆಯ-ವ್ಯಯದ ಪುನರ್ ಧನವಿನಿಯೋಗ (ಮರುಹೊಂದಾಣಿಕೆ) ಮತ್ತು ಪೂರಕ ಅನುದಾನ ಕುರಿತು.</td></tr>
<tr><td>ನಿರ್ಣಯ:</td><td>2023-24ನೇ ಹಣಕಾಸು ವರ್ಷದ ಆಯ-ವ್ಯಯದಲ್ಲಿ ಕೊರತೆಯಾಗಿರುವ ಅನುದಾನವನ್ನು <u>ಜ್ಞಾನ ಸಹ್ಯಾದ್ರಿಯ ಶೀರ್ಷಿಕೆ, 1ಎ.ಡಿ.14.1, 1ಎಡಿ.14.4 ಮತ್ತು 1ಎಡಿ.5.4, ಶೀರ್ಷಿಕೆಗಳಿಗೆ ಹಾಗೂ 1ಎಸಿ7.2.5.4, 1ಎಸಿ7.2.6.4 ಶೀರ್ಷಿಕೆಗಳಿಗೆ 1ಎಡಿ 14.14, ಆಸರೆ ಶೀರ್ಷಿಕೆಯಿಂದ ರೂ. 6,00,000/-ಲಕ್ಷಗಳು ಹಾಗೂ 1 ಎ.ಸಿ 5.7 ಅವರ್ತ ನಿಧಿ ಶೀರ್ಷಿಕೆಯಿಂದ ರೂ. 3,11,000.00 ಒಟ್ಟಾರೆ ರೂ.9,11,000/- ಲಕ್ಷಗಳನ್ನು</u> ಪ್ರಪತ್ರ-22ಎ (ಅನುಚ್ಛೇದ-308, ಕೆ.ಎಫ್.ಸಿ)ರ ಪ್ರಕಾರದಂತೆ ಪುನರ್ ಧನ ವಿನಿಯೋಗ ಮಾಡಿಕೊಳ್ಳಲು ಸಭೆಯು ಅನುಮೋದನೆ ನೀಡಿತು.</td></tr>
</table>

ಅಂತಿಮವಾಗಿ, ಸಭೆಗೆ ಆಗಮಿಸಿ ತಮ್ಮ ಅತ್ಯಮೂಲ್ಯ ಸಲಹೆ/ ಸಹಕಾರಗಳನ್ನು ನೀಡಿದ ಅಧ್ಯಕ್ಷರು ಹಾಗೂ ಎಲ್ಲಾ ಸದಸ್ಯರುಗಳಿಗೆ ಹಣಕಾಸು ಅಧಿಕಾರಿಗಳು ವಂದಿಸಿದ ನಂತರ ಸಭೆಯು ಮುಕ್ತಾಯಗೊಂಡಿತು.

(ಶ್ರೀ ಜಿ. ಬಂಗಾರಪ್ಪ ಕೆ.ಎಸ್.ಎ.ಎಸ್.)
ಹಣಕಾಸು ಅಧಿಕಾರಿ ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
(ಪ್ರೊ. ಎಸ್. ವೆಂಕಟೇಶ್)
ಕುಲಪತಿಗಳು ಹಾಗೂ ಅಧ್ಯಕ್ಷರು